ಕನ್ನಡಪ್ರಭ

# ನೀರಲ್ಲಿ ನಲಿದ ನೀಲ್

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ್ ಕಾಲೇಜು ಈಜು ಚಾಂಪಿಯನ್‌ಶಿಪ್‌ನಲ್ಲಿ ನೀಲ್ ಕಂಟ್ರಾಕ್ಟರ್ ಮಿಂಚಿನ ಪ್ರದರ್ಶನ ತೋರುವ ಮೂಲಕ, ಕೂಟದಲ್ಲಿ ವೇಗದ ಈಜು ಸಾಧನೆ ಮಾಡಿದ್ದಾರೆ.

ಬುಧವಾರ ನಡೆದ ಪುರುಷರ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ನೀಲ್ ಕಂಟ್ರಾಕ್ಟರ್, 24:51 ಸೆಂಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಪಡೆದಿದ್ದಾರೆ. ಇತ್ತೀಚೆಗೆ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ನೀಲ್, ಚಾಂಪಿಯನ್‌ಶಿಪ್‌ನ 4ನೇ ದಿನ ಅತ್ಯುತ್ತಮ ಪ್ರದರ್ಶನ ತೋರಿದರು.

ಇನ್ನು ಪುರುಷರ 4x100 ಫ್ರೀಸ್ಟೈಲ್‌ನಲ್ಲಿ ಪಂಜಾಬ್ ವಿವಿ ಹೊಸ ದಾಖಲೆ ಬರೆಯಿತು. 3:47:10 ನಿಮಿಷದಲ್ಲಿ ಗುರಿ ತಲುಪಿದ ಪಂಜಾಬ್ ವಿವಿ, ತನ್ನ ಹಿಂದಿನ ದಾಖಲೆ 3:48:51 ಅನ್ನು ಅಳಿಸಿ ಹಾಕಿತು. ಇನ್ನು ನಾಲ್ಕನೇ ದಿನವೂ ಗಮನ ಸೆಳೆದ ಜೈನ್ ವಿವಿಯ ಮೀನಾಕ್ಷಿ ವಿಕೆಆರ್ ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ನೂತನ ದಾಖಲೆ ನಿರ್ಮಿಸಿದರು. ಈ ಮೂಲಕ ಪ್ರಸಕ್ತ ಚಾಂಪಿಯನ್‌ಶಿಪ್‌ನಲ್ಲಿ ಮೀನಾಕ್ಷಿ 5ನೇ ದಾಖಲೆ ನಿರ್ಮಿಸಿದ್ದಾರೆ. ಇನ್ನು ಮಹಿಳೆಯರ 4x100 ಮೀ. ಫ್ರೀಸ್ಟೈಲ್‌ನಲ್ಲಿ ದೆಹಲಿ ವಿವಿ ತಂಡ (4:25:02) ದಾಖಲೆ ನಿರ್ಮಿಸಿದೆ. ದೆಹಲಿ ಈ ಹಿಂದೆ ಜೈನ್ ವಿವಿ ನಿರ್ಮಿಸಿದ್ದ (4:26:52) ದಾಖಲೆಯನ್ನು ಹಿಂದಿಕ್ಕಿತು.

ಪುರುಷರ 200 ಮೀ. ಮೆಡ್ಲೆಯಲ್ಲಿ ಬೆಳಗಾವಿಯ ವಿಟಿಯುನ ಅರವಿಂದ್ ಎಂ, 2:11:88 ನಿಮಿಷದಲ್ಲಿ ಗುರಿ ತಲುಪಿ ಚಿನ್ನದ ಪದಕ ಪಡೆದರು. ನಂತರ ದೇವಿಲಾಲ್ ವಿವಿಯ ಪುಲ್ಕಿತ್ ಹಾಗೂ ಪಂಜಾಬ್ ವಿವಿಯ ಜಷನ್‌ದೀಪ್ ಸಿಂಗ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು. ಮಹಿಳೆಯರ ವಿಭಾಗದಲ್ಲಿ ಜೈನ್ ವಿವಿಯ ಮೀನಾಕ್ಷಿ (2:31:55) ಹಾಗೂ ಪೂರ್ವಾ ಶೆಟ್ಟಿ (2:40:40) ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕ ಪಡೆದರು. ಇನ್ನು ಬಿಲಾಸ್‌ಪುರ್ ವಿವಿಯ ಸೃಷ್ಟಿ ನಾಗ್ (2:42:19) ಕಂಚಿಗೆ ತೃಪ್ತಿಪಟ್ಟರು.

ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ವಿಟಿಯುನ ಅರವಿಂದ್ ಎಂ (59:75) ಚಿನ್ನದ ಪದಕ ಬಾಚಿದರು. ಅಣ್ಣಾ ವಿವಿಯ ಅಬ್ಬಾಸುದ್ದೀನ್ (1:03:21) ಹಾಗೂ ಜೈನ್ ವಿವಿಯ ರಕ್ಷಿತ್ ಶೆಟ್ಟಿ (1:04:35) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ಭಾಜನರಾದರು. ಮಹಿಳೆಯರ ವಿಭಾಗದಲ್ಲಿ ಮೀನಾಕ್ಷಿ (1:07:95) ಚಿನ್ನದ ಪದಕ ಪಡೆದರು.

ಮಹಿಳೆಯರ 50 ಮೀ. ಫ್ರೀಸ್ಟೈಲ್‌ನಲ್ಲಿ ಬೆಂಗಳೂರಿನ ಸ್ನೇಹಾ ಟಿ (28:82), ಮೀನಾಕ್ಷಿ (29:25) ಹಾಗೂ ದೆಹಲಿ ವಿವಿಯ ಅಂಜಲಿ ನಾಯರ್ (29:66) ಕ್ರಮವಾಗಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಪಡೆದರು.

ಪುರುಷರ 4x100 ಫ್ರೀಸ್ಟೈಲ್‌ನಲ್ಲಿ ಪಂಜಾಬ್ ವಿವಿ ಅಗ್ರಸ್ಥಾನ ಪಡೆದರೆ, ಮದ್ರಾಸ್ ವಿವಿ ಹಾಗೂ ವಿಟಿಯು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆಯಿತು. ಮಹಿಳೆಯರ ವಿಭಾಗದಲ್ಲಿ ದೆಹಲಿ ವಿವಿ, ಕೇರಳ ವಿವಿ ಹಾಗೂ ಕಲ್ಲಿಕೋಟೆ ವಿವಿ ಕ್ರಮವಾಗಿ ಮೂರು ಸ್ಥಾನ ಪಡೆದವು.



**ಪುರುಷರ 4x100 ಮೀಟರ್ ಫ್ರೀಸ್ಟೈಲ್‌ನಲ್ಲಿ ದಾಖಲೆ ಬರೆದ ಪಂಜಾಬ್ ವಿಶ್ವವಿದ್ಯಾಲಯದ ಈಜುಗಾರರು ಸ್ವರ್ಣ ಪದಕ ಪಡೆದಿರುವುದು.**

## 4ನೇ ದಿನದ ಫಲಿತಾಂಶ

**ಪುರುಷರ ವಿಭಾಗ:** 50 ಮೀ. ಫ್ರೀಸ್ಟೈಲ್- 1.ನೀಲ್ ಕಂಟ್ರಾಕ್ಟರ್, 2.ಅಮನ್ ಘಾಯ್, 3.ಪುಲ್ಕಿತ್, (24.81).

100 ಮೀ. ಬ್ಯಾಕ್‌ಸ್ಟ್ರೋಕ್- 1.ಅರವಿಂದ್ ಎಂ (ವಿಟಿಯು), 2.ಅಬ್ಬಾಸುದ್ದೀನ್, 3.ರಕ್ಷಿತ್ ಶೆಟ್ಟಿ (ಜೈನ್ ವಿವಿ), (59.75).

200 ಮೀ. ಮೆಡ್ಲೆ- 1.ಅರವಿಂದ್ ಎಂ (ವಿಟಿಯು), 2.ಪುಲ್ಕಿತ್, 3.ಜಷನ್‌ದೀಪ್ ಸಿಂಗ್, (2:11.88).

4x100 ಫ್ರೀಸ್ಟೈಲ್ ರಿಲೇ- 1.ಪಂಜಾಬ್, 2. ಮದ್ರಾಸ್, 3.ವಿಟಿಯು, (3:47.10)

**ಮಹಿಳೆಯರ ವಿಭಾಗ:** 50 ಮೀ. ಫ್ರೀಸ್ಟೈಲ್- 1.ಸ್ನೇಹಾ ಟಿ, 2.ಮೀನಾಕ್ಷಿ (ಜೈನ್ ವಿವಿ), 3.ಅಂಜಲಿ ನಾಯರ್, (28.82).

100 ಮೀ. ಬ್ಯಾಕ್‌ಸ್ಟ್ರೋಕ್- 1.ಮೀನಾಕ್ಷಿ (ಜೈನ್ ವಿವಿ), 2.ರಾವೂಗ್ ಗುಲ್ನಾಜ್, 3.ಅನನ್ಯ ಪನಿಗ್ರೈ, (1:07.95).

200 ಮೀ. ಮೆಡ್ಲೆ- 1.ಮೀನಾಕ್ಷಿ (ಜೈನ್ ವಿವಿ), 2.ಪೂರ್ವಾ ಶೆಟ್ಟಿ, 3.ಸೃಷ್ಟಿ ನಾಗ್, (2:31.55)

4x100 ಫ್ರೀಸ್ಟೈಲ್ ರಿಲೇ- 1.ದೆಹಲಿ ವಿವಿ, 2. ಕೇರಳ, 3.ಕಲ್ಲಿಕೋಟೆ, (4:25.02)

**ಡೈವಿಂಗ್ (1ಎಂ ಸ್ಪ್ರಿಂಗ್ ಬೋರ್ಡ್):** ಪುರುಷರ ವಿಭಾಗ: 1.ಗೌರವ್ ರಘುವಂಶಿ, 2. ಅತ್ರವ್ ಅಗರ್‌ವಾಲ್, 3.ಇಂದ್ರಜಿತ್ ಶಿಂಧೆ, (238.10), ಮಹಿಳೆಯರ ವಿಭಾಗ: 1.ಸುಶ್ಮಿತಾ ವಾಸ್ತಾ, 2.ನಮ್ಮಿ ತೇಜಾ (ವಿಟಿಯು), 3.ಖುಷ್ಬು, (146.55)